ಡಿಸ್ಟ್ರಿಕ್ಟ್ ವ ಸಬ ಡಿಸ್ಟ್ರಿಕ್ಟ್‌ಗಳು.		1882–83ನೇ ಇಸವಿಯಲ್ಲಿ ಸಬ ರಜಿಸ್ಟ್ರಾರಿಗೆ ಕೆ॥ 40ರ ಪ್ರಕಾರ ಪಾವತೀಯಾದ ಮಾಹೆಯಾನಾ ಸರಾಸರಿ ಮೊಬಲಗು.	ಹಾಲೀ ಸಲ್ಲತಕ್ಕ ಮಾಹೆಯ ನಾ ರುಸುಂ	ಐಯಿಂದ ಕೊಡ(ಕಾ)ವ ರುಸುಂ.
		ರೂಪಾಯಿ.	ರೂಪಾಯಿ	ರೂಪಾಯಿ.
ಬೆಂಗಳೂರು	ವ್ಹೈಟ್‌ಫೀಲ್ಡ್	12	ಗೊತ್ತಿಲ್ಲಾ	10
	ಕುಣಿಗಲ್	13	ಡಿಟೋ	10
	ದೊಡ್ಡಬಳ್ಳಾಪುರ	12	ಡಿಟೋ	10
ಮೈಸೂರು	ಚಾಮರಾಜನಗರ	31	10	15
	ನಂಜನಗೂಡು	22	10	15
	ಯಳಂದೂರು	22	10	15
	ಹುಣಸೂರು	18	ಗೊತ್ತಿಲ್ಲಾ	12
ತುಮಕೂರು	ತಿಪಟೂರು	21	10	15
	ತುಮಕೂರು	16	10	12
	ಗುಬ್ಬಿ	11	ಗೊತ್ತಿಲ್ಲಾ	10
ಕಡೂರು	ಚಿಕ್ಕಮಗಳೂರು.	41	20ರ ಇಸಂ1–10ರ ಇಸಂ1	20
	ಮೂಡಗೆರೆ	13	ಗೊತ್ತಿಲ್ಲಾ	10
ಹಾಸನ	ಮಂಜೆರಾಬಾದು.	14	ಡಿಟೋ	10.

ಹೆಚ್. ಹಡಸರ್,

ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್.

ನಂದೀದುರ್ಗ ಡಿವೀಜನ್

ನಂದೀದುರ್ಗ ಡಿವೀಜನ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

ಈದರಂಣನ ಮಗ ದೊಡ್ಡನರಸುಪ್ಪನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ವ್ಯಾಜ್ಯದ ನಂಬರಿ 78.

ಹುಕ್ಕುಂ.

ಮೇಲ್ಕಂಡ ದೊಡ್ಡನರಸುಪ್ಪನು ಖುಲಾಸೇಯಾಗಬೇಕೆಂದು ಕೋರಿ ಸರದುಕೊಂಡ ಅರ್ಜೀಯು ಟಿ. ಆರ್. ಯೆ. ತಂಬುಚೆಟ್ಟಿಯಾರ್, ಡಿಸ್ಟ್ರಿಕ್ಟ್ ಜಡ್ಜೀಯವರ ರೂಬರೂ ಅರ್ಜೀದಾರನ ಪರವಾಗಿ ಯಿವನ ಸಮಕ್ಷಮದಲ್ಲಿಯೂ ಮತ್ತು ಐಜ್ ಅರ್ಜೀದಾರನ ಲೇಣೇದಾರರಾದ ವೆಂಕಟಸಾಮಿ ವಗೈರೇರ ಗೈರ್ ಹಾಜರ್, ದರ್ಯಾಫ್ತೀ ಮಾಡಲ್ಪಟ್ಟತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಅಥವಾ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ– 1ನೇ ವೆಂಕಟಸಾಮಿ, 2ನೇ ದೊಡ್ಡವೀರಭದ್ರಂಣ, 3ನೇ ಚಿಕ್ಕವೀರಭದ್ರಂಣ, 4ನೇ ಬೈರಂಣ, 5ನೇ ನಾರಣಯ್ಯರ್, 6ನೇ ಅದಾಲತ್ತು ಬ್ಯಾಂಕ, 7ನೇ ಪುಟ್ಟಂಣ, 8ನೇ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ, 9ನೇ ಗಿಡ್ಡಂಣ, 10ನೇ ಲಕ್ಷ್ಮೀನಾರಣಪ್ಪ

ಸದರೀ ದೊಡ್ಡನರಸುಪ್ಪನು ದಿವಾಳೀಯಾದವನೆಂದನ್ನು ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು, ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ಸರಸ್ತೇದಾರು, ಇನ್ನು ಮುಂದೆ ನಮೂದಾದಂತೆ ಐಜ್ ದಿವಾಳೀಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ರ್ಮಾಡಲ್ಪಡತಕ್ಕದೆಂದನ್ನು ಸದರೀ ರಿಸೀವರಾದವನು ಸದರೀ ದಿವಾಳೀಯಾದವನ ಜಿಂದಗಿಗೆ ಜವಾಬೆ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ್ ಕೆಲಸಗಳಿಗೆ

ಉದ್ಯುಕ್ತ ಪಡತಕ್ಕದ್ದೆಂದುನ್ನು ಮತ್ತು ಸದರೀ ರಿಸೀವರನು ತಾನು ನಡಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳೀಯಾದವನ ಲೇಜೀದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕೀ ಹಣದಲ್ಲಿ ದರ ಕೇಕಡಾ 5 ರೂಪಾಯಿ ಮೇರೆ ಕಮ್ಮಿಷ್ಸರ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1884ನೇ ಇಸವಿ ಏಪ್ರಿಲ್ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರೀಯವರ ಕೋರ್ಟಿನಲ್ಲಿ

1884ನೇ ಇಸವಿ ಅರ್ಜೀ ನಂಬರ್ 146.

ಮೃತಪಟ್ಟ ನಾಗುಬಾಯಿ ಶ್ಯಾಮರಾವ್ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಲಕ್ಷ್ಮಣರಾವ್, ಮೃತಪಟ್ಟ ಸದರೀ ನಾಗುಬಾಯಿ ಶ್ಯಾಮರಾವುಗೆ ಬಂಧು ಆಗಬೇಕೆಂಬ ಹಕ್ಕುದಾರೀ ಮೇಲೆ ನೈಸೂರು ಸ್ಥಳದ ಸದರೀ ಲಕ್ಷ್ಮಣರಾವ್, ಸದರೀ ವಾಸಸ್ಥರಾಗಿ ಮೃತಪಟ್ಟ ನಾಗುಬಾಯಿ ಶ್ಯಾಮರಾವ್ ಜಿಂದಗೀ ಬಗ್ಯಾಗೆ ಬರತಕ್ಕ 70–6–0 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಣರಾವ್, ಅರ್ಜೀಯನ್ನು 1884ನೇ ಇಸವೀ ಜೂನ್ ತಿಂಗಳು ತಾರೀಖು 24ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗುಬಾಯಿ, ಶ್ಯಾಮರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಏಪ್ರಿಲ್ ತಿಂಗಳು 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 156.

ಮೃತಪಟ್ಟ ಸೂರನಾರಣಭಟ್ಟನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನಂಜುಂಡಯ್ಯ, ಮೃತಪಟ್ಟ ಸದರೀ ಸೂರನಾರಣಭಟ್ಟನಿಗೆ, ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ನಂಜುಂಡಯ್ಯನು ಸದರೀ ವಾಸಸ್ಥರಾಗಿ ಮೃತಪಟ್ಟ ಸೂರನಾರಣಭಟ್ಟನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜುಂಡಯ್ಯನ ಅರ್ಜಿಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 24ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರನಾರಣಭಟ್ಟನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಏಪ್ರಿಲ್ ತಿಂಗಳು 9ನೇ ತಾರೀಖಿಲ್ಲಿನ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಂಹ್ಯಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 17ನೇ ಏಪ್ರಿಲ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲೀಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಯಿತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಯ ಆಕ್ಟು 85ನೇ ಸೆಕ್ಷ್ಯನ್ ಅನುಸರಿಸಿ ಅದನ್ನು ನಾಶ ಪಡಿಸಲ್ಪಡುವದು.